
# ವಚನವೇದದ ಇತಿಹಾಸ



ಸ್ವಾಮಿ ಪ್ರಭಾನಂದ

ಶ್ರೀರಾಮಕೃಷ್ಣ ವಚನವೇದದ ಪ್ರಕಟಣೆಯ ಇತಿಹಾಸವು ಸಮರ್ಪಣಾಭಾವದ ಒಂದು ಗಾಥೆ. ಅದು ಸ್ವಾರಸ್ಯಕರ ವಾದುದು ಮತ್ತು ರೋಚಕವಾದುದು. ಇದರ ಮನೋಜ್ಞ ವಿವರಣೆಯನ್ನು ನಮಗಿತ್ತಿರುವ ಸ್ವಾಮೀಜಿಯವರು ರಾಮ ಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳು. ಈ ಭಾಗವನ್ನು ಅವರ *More About Ramakrishna* ಎಂಬ ಗ್ರಂಥದಿಂದ ತೆಗೆದುಕೊಳ್ಳಲಾಗಿದೆ. ಈ ಪುಸ್ತಕದ ಕನ್ನಡ ಅನುವಾದವನ್ನು ಕುಮಾರಿ ಸ್ವರ್ಣಗೌರಿಯವರು ಮಾಡಿದ್ದಾರೆ.

**ಭಾ**ರತದಲ್ಲಿ ರಾಮಕೃಷ್ಣ–ವಿವೇಕಾನಂದ ಚಳುವಳಿ ಎಂದು ಪ್ರಚಲಿತವಾಗಿರುವ ವೇದಾಂತ ಆಂದೋಲನದಲ್ಲಿ 'ಶ್ರೀರಾಮಕೃಷ್ಣ ವಚನವೇದ' ಎಂಬ ಗ್ರಂಥವು ಬಹು ಪ್ರಮುಖ ಸ್ಥಾನವನ್ನು ಪಡೆದಿದೆ. ಇದನ್ನು 'ಮ' ಎಂದೇ ಪ್ರಖ್ಯಾತರಾದ ಶ್ರೀ ಮಹೇಂದ್ರಗುಪ್ತರು ರಚಿಸಿದರು.

ಮೂಲ ಬಂಗಾಳಿಯಲ್ಲಿ ಈ ಕೃತಿಯ ಹೆಸರು 'ಶ್ರೀ ಶ್ರೀ ರಾಮಕೃಷ್ಣ ಕಥಾಮೃತ' ಎಂದು. ೧೯೦೨ ರ ಶ್ರೀರಾಮಕೃಷ್ಣರ ಜನ್ಮತಿಥಿಯಂದು ಐದು ಭಾಗಗಳ ಈ ಗ್ರಂಥದ ಮೊದಲನೆಯ ಸಂಪುಟವು ಪ್ರಕಟವಾಯಿತು. ಆದರೆ ಗ್ರಂಥರೂಪದಲ್ಲಿ ಪ್ರಕಟ ವಾಗುವ ಮುನ್ನ ಅದು ಅನೇಕ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿತ್ತು. ಸ್ವಾರಸ್ಯಕರ ಸಂಗತಿಯೆಂದರೆ, ಆ ಲೇಖನಗಳು ಅವೆಷ್ಟು ಪ್ರಸಿದ್ಧವಾದುವೆಂದರೆ, ಕೊಲ್ಕತಾದ ಸುತ್ತಮುತ್ತ ೧೭ ಪತ್ರಿಕೆಗಳಲ್ಲಿ ಅವು ಪ್ರಕಟವಾಗುತ್ತಿದ್ದವು. ಬಂಗಾಳದಲ್ಲಿ ಇದೊಂದು ಅಸಾಮಾನ್ಯವಾದ ಘಟನೆಯೇ ಸರಿ. ೧೯೮೩ ರ ಜನವರಿ ೧ ರಂದು ಇದರ ಗ್ರಂಥಸ್ವಾಮ್ಯ ಮುಗಿದ ಕೂಡಲೇ, ಆರು ಪ್ರಕಾಶಕರು ಬಂಗಾಳಿ ಭಾಷೆಯಲ್ಲಿ ಇದನ್ನು ಬೇರೆ ಬೇರೆಯಾಗಿ ಪ್ರಕಟಿಸಿದರು. ಆ ದಿನ ಮತ್ತೊಂದು ಆಶ್ಚರ್ಯಕರ ಘಟನೆ ನಡೆಯಿತು. ಆ ಗ್ರಂಥಕ್ಕೆ ಅದೆಷ್ಟು ಬೇಡಿಕೆಯಿತ್ತೆಂದರೆ ಎಲ್ಲ ಮಾರಾಟ ಮಳಿಗೆಗಳ ಮುಂದೆಯೂ ಜನರ ದೊಡ್ಡ ಸಾಲುಗಳು ನಿಂತಿದ್ದವು ಮತ್ತು ಜನಜಂಗುಳಿಯನ್ನು ನಿಯಂತ್ರಿಸಲು ಪೋಲಿಸರು ಲಾಠಿ ಪ್ರಯೋಗ ಮಾಡಬೇಕಾಯಿತು. ಬಂಗಾಳದ ಸುಪ್ರಸಿದ್ಧ ವೃತ್ತ ಪತ್ರಿಕೆ 'ಆನಂದ ಬಜಾರ್'ನಲ್ಲಿ **'ಗ್ರಂಥಸ್ವಾಮ್ಯ ಮುಗಿದ ಕೂಡಲೇ ವಚನವೇದವು ಪ್ರವಾಹದಂತೆ ಹರಡುತ್ತಿದೆ"** ಎಂಬ ದಪ್ಪಕ್ಷರಗಳ ಒಂದು ದೊಡ್ಡ ಶಿರೋನಾಮ ಕಾಣಿಸಿಕೊಂಡಿತು. ಇದು ಆ ಕೃತಿಯ ಜನಪ್ರಿಯತೆಯನ್ನು ತೋರುತ್ತದೆ.

'ಕಥಾಮೃತ' ಎಂಬ ಬಂಗಾಳಿ ಮತ್ತು ಸಂಸ್ಕೃತ ಪದ 'ಸಂದೇಶ' ಮತ್ತು 'ಜೀವನಕಥೆ' ಎಂಬ ಅರ್ಥವನ್ನು ಹೊಂದಿದೆ. ಶ್ರೀರಾಮಕೃಷ್ಣ ವಚನ ವೇದವು ವಿಶಿಷ್ಟವಾದುದು, ಏಕೆಂದರೆ ಇದರಲ್ಲಿ ಮೇಲಿನವುಗಳಲ್ಲದೆ ಇನ್ನೂ ಹೆಚ್ಚಿನದೇನೋ ಇದೆ. ಕೇವಲ ಸಂದೇಶ ಮತ್ತು ಕಥೆಯಲ್ಲದೆ, ಗುರುದೇವರ ಅನುಪಸ್ಥಿತಿಯಲ್ಲಿ 'ಮ' ಶ್ರೀರಾಮಕೃಷ್ಣರ ಬಗ್ಗೆ ಇತರರೊಡನೆ ನಡೆಸಿದ ಸಂಭಾಷಣೆಗಳು, 'ಮ'ರವರ ವೈಯಕ್ತಿಕ ಅವಲೋಕನ ಮತ್ತು ಚಿಂತನೆಗಳು ಹಾಗೂ ಶ್ರೀರಾಮಕೃಷ್ಣರ ಯಾವುದಾದರೂ ಒಂದು ನುಡಿಯ ಕುರಿತು 'ಮ'ರವರ ಟೀಕೆ, ಟಿಪ್ಪಣಿ ಇತ್ಯಾದಿಗಳೂ ಇದರಲ್ಲಿವೆ. ಶ್ರೀರಾಮಕೃಷ್ಣರು ಇದ್ದ ಸಮಯಕ್ಕೆ ನಮ್ಮನ್ನು ಕರೆದೊಯ್ಯಲು 'ಮ', ಆ ಸನ್ನಿವೇಶಗಳನ್ನು ಸುದೀರ್ಘ ವಾಗಿ ವಿವರಿಸಿದ್ದಾರೆ. ಶ್ರೀರಾಮಕೃಷ್ಣರು ಹಾಡಿದ ಅಥವಾ ಅವರ ಸನ್ನಿಧಿಯಲ್ಲಿ ಇತರರು ಹಾಡಿದ ೩೫೦ ಹಾಡುಗಳನ್ನೂ ಸೇರಿಸಿದ್ದಾರೆ. ನಾವು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ, ಶ್ರೀರಾಮಕೃಷ್ಣ ವಚನವೇದದಲ್ಲಿ 'ಮ' ರವರ ಜೀವನಚರಿತ್ರೆಯೂ ಅಡಗಿದೆ ಎಂಬುದು ತಿಳಿಯುತ್ತದೆ.

ಈ ಗ್ರಂಥವು ಬಹುಶಃ ಮೂರು ಕಂತುಗಳಲ್ಲಿ ಪ್ರಕಟ ವಾಗಿದ್ದಿರಬೇಕು. ಇದರ ಕೊನೆಯ ಭಾಗ ೧೮೯೨ ರಲ್ಲಿ ಪ್ರಕಟವಾಯಿತು. ಸ್ವಾಮಿ ವಿವೇಕಾನಂದರು ಮೊದಲನೇ ಭಾಗದ ಪ್ರತಿಯನ್ನು ಓದಿದ ಕೂಡಲೆ, "ನೀನು ರಾಮಕೃಷ್ಣ ರನ್ನು ಸರಿಯಾಗಿ ಸೆರೆಹಿಡಿದಿದ್ದೀಯೆ" ಎಂದು 'ಮ'ಗೆ ಪತ್ರ ಬರೆದರು. ಆದರೆ ಕೆಲವು ವರ್ಷಗಳ ನಂತರ ಶ್ರೀರಾಮಕೃಷ್ಣರ

ಸಂಭಾಷಣೆಗಳನ್ನು ಪ್ರಕಟಿಸಬೇಕೆಂದು ಇಚ್ಛೈಸಿದ 'ಮ', ಪುಸ್ತಕದ ಶೈಲಿಯನ್ನೇ ಬದಲಾಯಿಸಿದರು. ಬಹುಶಃ ಇದರ ಕರಡುಪ್ರತಿಯನ್ನು ಪ್ರಥಮ ಬಾರಿ ಆಲಿಸಿದವರೆಂದರೆ ಶ್ರೀಮಾತೆ ಶಾರದಾದೇವಿಯವರು. ೧೮೯೭ ರ ಜುಲೈ ೪ ರಂದು, "ಅದನ್ನು ನೀನು ಓದುತ್ತಿರುವಾಗ ಶ್ರೀರಾಮಕೃಷ್ಣರ ಶ್ರೀಮುಖದಿಂದಲೇ ಕೇಳುತ್ತಿರುವಂತೆ ಭಾಸವಾಯಿತು" ಎಂದು 'ಮ'ಗೆ ಅವರು ಒಂದು ಸುಂದರ ಪತ್ರವನ್ನು ಬರೆಯುತ್ತಾರೆ. ಶ್ರೀಮಾತೆಯವರು 'ಮ' ಗೆ ಅನೇಕ ರೀತಿಯಲ್ಲಿ ಸಹಾಯ ಮಾಡಿದರು. ಅವರ ಬೆಂಬಲವಿಲ್ಲದಿದ್ದರೆ ಬಹುಶಃ ವಚನವೇದ ಪ್ರಕಟವಾಗುತ್ತಿರಲಿಲ್ಲ.

ಇದಾದನಂತರ, 'ಮ' ಇಂಗ್ಲಿಷಿನಲ್ಲಿ ವಚನವೇದವನ್ನು ಬರೆಯತೊಡಗಿದರು. ಚೆನ್ನೈಯಿಂದ ಪ್ರಕಟವಾಗುತ್ತಿದ್ದ ಇಂಗ್ಲಿಷ್ ಪತ್ರಿಕೆ 'ಬ್ರಹ್ಮವಾದಿನ್' ನಲ್ಲಿ ೧೮೯೭ , ಅಕ್ಟೋಬರ್ ೧೫ ರಲ್ಲಿ ಇದರ ಮೊದಲ ಭಾಗ ಪ್ರಕಟವಾಯಿತು. ಮುಂದಿನ ಭಾಗ ಕೊಲ್ಕತಾದ 'ಡಾನ್' ಪತ್ರಿಕೆಯ ಡಿಸೆಂಬರ್ ಸಂಚಿಕೆಯಲ್ಲಿ ಹೊರಬಂದಿತು. ಸ್ವಾಮಿ ವಿವೇಕಾನಂದರು ಇವೆರಡನ್ನೂ ಓದಿ ಆನಂದಭರಿತರಾದರು.

ಶ್ರೀರಾಮಕೃಷ್ಣರ ಸಂನ್ಯಾಸಿಶಿಷ್ಯರಾದ ಸ್ವಾಮಿ ತ್ರಿಗುಣಾತೀತಾನಂದರು ಪತ್ರಿಕೆಗಳಲ್ಲಿ ಪ್ರಕಟವಾದ ಎಲ್ಲ ಲೇಖನಗಳನ್ನೂ ಸಂಗ್ರಹಿಸಿ ೧೯೦೨ ರ ಶ್ರೀರಾಮಕೃಷ್ಣರ ಜನ್ಮತಿಥಿಯಂದು 'ಶ್ರೀರಾಮಕೃಷ್ಣ ಕಥಾಮೃತ'ದ ಮೊದಲ ಭಾಗವನ್ನು ಪ್ರಕಟಿಸಿದರು. ತರುವಾಯ 'ಮ' ಪುಸ್ತಕದ ರೂಪದಲ್ಲಿ ಇದನ್ನು ಪ್ರಕಟಿಸುವ ಜವಾಬ್ದಾರಿ ಹೊತ್ತರು. ಮುಂದೆ ಈ ಮಹತ್ ಕೃತಿಯು ಐದು ಸಂಪುಟಗಳಲ್ಲಿ ಪ್ರಕಟವಾಯಿತು. ಮೊದಲನೆಯ ಸಂಪುಟ ೧೯೦೨ ರಲ್ಲಿ ಮತ್ತು ಎರಡನೆಯ ಸಂಪುಟ ೧೯೧೦ ರಲ್ಲಿ ಪ್ರಕಟವಾದುವು. 'ಮ'ರವರ ಜೀವನದಲ್ಲಿ ಇದು ಅತ್ಯಂತ ಸೃಜನಾತ್ಮಕ ಅವಧಿ.

ನಾಲ್ಕು ಸಂಪುಟಗಳು ಪ್ರಕಟವಾದ ನಂತರ 'ಮ' ಮರುಮುದ್ರಣಗಳ ವ್ಯವಸ್ಥೆಯಲ್ಲಿ ಕಾರ್ಯಮಗ್ನರಾದರು. ಪುಸ್ತಕದ ಬೆಲೆ ಕಡಿಮೆಯಿದ್ದರೆ ಎಲ್ಲರಿಗೂ ಕೈಗೆಟುಕುವುದೆಂದು ತಾವೇ ಸ್ವತಃ ಕರಡಚ್ಚು ತಿದ್ದುಪಡಿಗಳನ್ನು ಮಾಡುತ್ತಿದ್ದರು. ಇದರಿಂದಾಗಿ ಅವರಿಗೆ ಮುಂದಿನ ಸಂಪುಟಗಳನ್ನು ಬರೆಯಲು ಸಮಯ ದೊರಕದೆ ಹೋಯಿತು. ಆಗ ಶ್ರೀಮಾತೆಯವರು ಸ್ವತಃ, " 'ಮ' ಬಳಿ ಅಷ್ಟೊಂದು ಮಾಹಿತಿಯಿದೆ, ಏಕೆ ಪ್ರಕಟಿಸುತ್ತಿಲ್ಲ?" ಎಂದು ಅನೇಕ ಬಾರಿ ವಿಚಾರಿಸಿದರು. ವಾಸ್ತವವಾಗಿ 'ಮ', ಇನ್ನೂ ಆರೇಳು ಸಂಪುಟಗಳನ್ನು ಪ್ರಕಟಿಸುವ ಹಾಗೂ ತದನಂತರ ಶ್ರೀರಾಮಕೃಷ್ಣರ ಒಂದು ಪ್ರಮಾಣಬದ್ಧ ಜೀವನಚರಿತ್ರೆಯನ್ನು ಬರೆಯುವ ತಮ್ಮ ಇಚ್ಛೆಯನ್ನು, ನಾಲ್ಕನೆಯ ಸಂಪುಟದ ಪ್ರಸ್ತಾವನೆಯಲ್ಲಿ ವ್ಯಕ್ತಪಡಿಸಿದ್ದರು. ದುರದೃಷ್ಟವಶಾತ್, ಅವರು ಯಾವ ಜೀವನಚರಿತ್ರೆಯನ್ನೂ ಬರೆಯಲಾಗಲಿಲ್ಲ ಮತ್ತು ಇನ್ನೊಂದು ಸಂಪುಟ ಪ್ರಕಟವಾದ ತಕ್ಷಣ ದೈವಾಧೀನರಾದರು. ೧೯೨೫ ರಲ್ಲಿ ಬಂಗಾಳಿಯಲ್ಲಿ ಅವರು ಪ್ರಕಟಿಸಿದ ಒಂದು ಚಿಕ್ಕ ಪುಸ್ತಕವು ಈಗ ವಚನವೇದದ ಐದನೆಯ ಸಂಪುಟದ ಪರಿಶಿಷ್ಟವಾಗಿದೆ. ೧೯೩೨ ರಲ್ಲಿ ಅವರ ಸಾವು ಸಮೀಪಿಸುತ್ತಿರುವಾಗ ಐದನೆಯ ಸಂಪುಟ ಪೂರ್ಣಗೊಂಡಿತು; ಅವರ ಮರಣದ ಎರಡು ತಿಂಗಳ ಬಳಿಕವೇ ಅದು ಪ್ರಕಟವಾಯಿತು.

ಅದಕ್ಕೂ ಮುನ್ನ ಅಂದರೆ ೧೯೦೭ ರಲ್ಲಿ ಚೆನ್ನೈನ ರಾಮಕೃಷ್ಣ ಮಠವು ಇಂಗ್ಲಿಷ್ ಪತ್ರಿಕೆಗಳಲ್ಲಿ 'ಮ' ಪ್ರಕಟಿಸಿದ ಲೇಖನಗಳನ್ನೆಲ್ಲ ಸಂಗ್ರಹಿಸಿ, **The Gospel of Sri Ramakrishna (According to M, a son and disciple of the Lord)** ಅಥವಾ **The Ideal Man for India & for the world** ಎಂಬ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಿತು. ಅದೇ ವರ್ಷ ನ್ಯೂಯಾರ್ಕ್‌ನ ವೇದಾಂತ ಸೊಸೈಟಿಯವರು The Gospel of Sri Ramakrishna ಎಂಬ ಹೆಸರಿನಲ್ಲಿ ಇದನ್ನೇ ಪ್ರಕಟಿಸಿದರು. ಇದನ್ನು ಸ್ವಾಮಿ ಅಭೇದಾನಂದರು ಸಂಪಾದಿಸಿದ್ದರು. ಮುಂದೆ ೧೯೩೯ ರಲ್ಲಿ ಇದರ ಶೀರ್ಷಿಕೆಯನ್ನು The Memoirs of Ramakrishna ಎಂದು ಬದಲಾಯಿಸಲಾಯಿತು. ಅನಂತರ ಸ್ವಾಮಿ ನಿಖಿಲಾನಂದರು 'ಶ್ರೀರಾಮಕೃಷ್ಣ ಕಥಾಮೃತ' ದ ಐದೂ ಸಂಪುಟಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿದರು. ೧೯೪೮ ರಲ್ಲಿ ಅದನ್ನು The Gospel of Sri Ramakrishna ಎಂಬ ಹೆಸರಿನಲ್ಲಿ ನ್ಯೂಯಾರ್ಕಿನ ರಾಮಕೃಷ್ಣ–ವಿವೇಕಾನಂದ ಕೇಂದ್ರವು ಪ್ರಕಟಿಸಿತು. ಈ ಆವೃತ್ತಿಯನ್ನೇ ಭಾರತದಲ್ಲಿ ಇಂದಿಗೂ ಚೆನ್ನೈನ ಶ್ರೀರಾಮಕೃಷ್ಣ ಮಠವು ಹೊರತರುತ್ತಿದೆ.

ಈ ಗ್ರಂಥವು ೧೮೮೧, ಜನವರಿ ೧ ರಿಂದ ೧೮೮೭ರ ಮೇ ೧೦ ರವರೆಗಿನ ಅವಧಿಯ ಶ್ರೀರಾಮಕೃಷ್ಣರ ಸಂವಾದವನ್ನು ಒಳಗೊಂಡಿದೆ. ೧೮೮೨ ಮಾರ್ಚ್‌ನಲ್ಲಿ 'ಮ' ಶ್ರೀರಾಮಕೃಷ್ಣರನ್ನು ಪ್ರಥಮಬಾರಿಗೆ ಭೇಟಿಯಾದರು. ಆದ್ದರಿಂದ ತಾವು ಭೇಟಿಯಾಗುವ ಮುಂಚಿನ ಸಂಗತಿಗಳನ್ನು ಯಾರೋ ವಿಶ್ವಾಸಾರ್ಹ ವ್ಯಕ್ತಿಯಿಂದ ಅವರು ಸಂಗ್ರಹಿಸಿರಬಹುದು. ಆ ಅವಧಿಯಲ್ಲಿ ತಾವು ಶ್ರೀರಾಮಕೃಷ್ಣರನ್ನು ಇನ್ನೂ ಭೇಟಿಯಾಗಿರದಿದ್ದರೂ, ದೊರಕಿದ ಮಾಹಿತಿಯನ್ನು ಪುನಃ ಪುನಃ ಪರಿಶೀಲಿಸಿ ಯಥಾರ್ಥವೆಂದು ತೀರ್ಮಾನಿಸಿ ಅವರು ಸ್ವೀಕರಿಸಿದ್ದಾರೆ. ಒಟ್ಟು ೧೮೧ ದಿನಗಳ ವೃತ್ತಾಂತವನ್ನು ಈ ಗ್ರಂಥ ಒಳಗೊಂಡಿದೆ. ಕ್ರಿ.ಶ. ೧೮೮೨ ರ ಮಾರ್ಚ್ ತಿಂಗಳ ಒಂದು ಭಾನುವಾರದಿಂದ ಕ್ರಿ.ಶ. ೧೮೮೭ ರ ಮೇ ತಿಂಗಳವರೆಗೆ, ತಾವು ಶ್ರೀರಾಮಕೃಷ್ಣರನ್ನು ಖುದ್ದಾಗಿ ನೋಡಿ, ಕೇಳಿದ ವಿಷಯಗಳನ್ನು 'ಮ' ವಚನವೇದದಲ್ಲಿ ಬರೆದಿದ್ದಾರೆ.

ಈಗ ವಚನವೇದದ ಮಹತ್ವವನ್ನು ನೋಡೋಣ, ಕೇವಲ ಧಾರ್ಮಿಕ ರಂಗದಲ್ಲಿ ಅಲ್ಲದೆ ಸಾಹಿತ್ಯ ರಂಗದಲ್ಲೂ ವಚನವೇದ ಒಂದು ಅತ್ಯದ್ಭುತ ಕೃತಿ. ಮೊದಲನೆಯದಾಗಿ, ಶ್ರೀರಾಮಕೃಷ್ಣರ ಜೀವನವನ್ನು ಅವರ ಉಪದೇಶಗಳೊಡನೆ ಚಿತ್ರಿಸಿದ ಒಂದು

ಸುಂದರ ದಾಖಲೆಯಿದು. ಅವರ ಜೀವನವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಧ್ಯಾನಿಸಿದರೆ, ಅವರು ನಮಗೆ ತುಂಬ ಹತ್ತಿರವಾದಂತೆ ಭಾಸವಾಗುತ್ತದೆ. ಇದು ವಚನವೇದದ ವೈಶಿಷ್ಟ್ಯ. ಕೆಲವೊಮ್ಮೆ ಅವರು ನಮ್ಮ ಮುಂದೆ ಮಾತನಾಡುತ್ತಾರೆ; ಕೆಲವೊಮ್ಮೆ ನರ್ತಿಸುತ್ತಾರೆ; ಮತ್ತೂ ಕೆಲವೊಮ್ಮೆ ಗಾಢ ಸಮಾಧಿಸ್ಥರಾಗುತ್ತಾರೆ. ಅವರ ಜೀವಂತ ಸಾನ್ನಿಧ್ಯವನ್ನು ವಚನವೇದದ ಪ್ರತಿಪುಟದಲ್ಲೂ ನಾವು ಅನುಭವಿಸುತ್ತೇವೆ. ಇದು ಬೇರೆ ಯಾವ ವ್ಯಕ್ತಿಯ ಜೀವನಚರಿತ್ರೆಯಲ್ಲಾಗಲಿ ಅಥವಾ ಅವತಾರಪುರುಷರ ಅಧ್ಯಯನದಲ್ಲಾಗಲಿ ನಮಗೆ ದೊರಕದು. ಈ ಕಾರಣಕ್ಕಾಗಿ ವಚನವೇದವು ಅತ್ಯದ್ಭುತ ಕೃತಿಯೆನಿಸುತ್ತದೆ.

ವಚನವೇದದಲ್ಲಿ ಮೊದಲಬಾರಿಗೆ ಸಮಾಧಿಯನ್ನು ವಿವರಿಸ ಲಾಗಿದೆ. ಕೇವಲ ಸಮಾಧಿಯ ವಿವರಣೆ ಮಾತ್ರವಲ್ಲದೆ, ಆಧ್ಯಾತ್ಮಿಕ ಜೀವನದ ಇನ್ನಿತರ ದೃಷ್ಟಿಕೋನಗಳಿಂದ ಕೂಡಿದ ಇದು ಒಂದು ಮಹೋತ್ತಮ ಕೃತಿಯೆನಿಸಿದೆ. ವಚನವೇದದ ಯಶಸ್ಸಿಗೆ ಮತ್ತೊಂದು ಸ್ವಾರಸ್ಯಕರವಾದ ಕಾರಣವೆಂದರೆ ಶ್ರೀರಾಮಕೃಷ್ಣರು ಹಿಂದುವಾಗಿ ಹುಟ್ಟಿ ಬೆಳೆದಿದ್ದರೂ ಅವರ ಉಪದೇಶಗಳು ಕೇವಲ ಹಿಂದೂಗಳಿಗೆ ಮಾತ್ರ ಅನ್ವಯಿಸುವುದಿಲ್ಲ ಎಂಬುದು. ಇದು ಆಶ್ಚರ್ಯಕರವಾದ ಸಂಗತಿ. ಆತ್ಮಸಾಕ್ಷಾತ್ಕಾರ ಅಥವಾ ಭಗವತ್ಸಾಕ್ಷಾತ್ಕಾರ ಎಂಬ ಉದಾತ್ತ ಧ್ಯೇಯದೆಡೆಗೆ ಪಯಣಿಸುತ್ತಿರುವ ಎಲ್ಲ ಪಯಣಿಗರಿಗೂ ಶ್ರೀರಾಮಕೃಷ್ಣರ ಉಪದೇಶಗಳು ಚೇತೋಹಾರಿಯಾಗಿ ಅನ್ವಯಿಸುತ್ತವೆ.

ವಚನವೇದವು ನಿಜಕ್ಕೂ ಒಂದು ಆಧ್ಯಾತ್ಮಿಕ ಕೈಪಿಡಿ. ಇದು ದಿನನಿತ್ಯದ ಜೀವನದಲ್ಲೂ ಸಹಾಯಕಾರಿ. ಕೆಲವರು ತಮಗೆ ಅವಶ್ಯಕತೆ ಉಂಟಾದಾಗ ಓದಬೇಕೆಂದು ಕೆಲವು ಪುಟಗಳನ್ನು ಗುರುತು ಮಾಡಿಟ್ಟುಕೊಂಡಿರುತ್ತಾರೆ. ಒಂದು ವೇಳೆ ಯಾವುದೋ ಕಾರಣದಿಂದ ನಮಗೆ ದುಃಖ ಒದಗಿದೆ ಎಂದಿಟ್ಟುಕೊಳ್ಳೋಣ. ಆ ಸಮಯದಲ್ಲಿ ಶ್ರೀರಾಮಕೃಷ್ಣರು ಏನು ಹೇಳುವರೆಂಬುದನ್ನು ಓದಲು ನಮಗೆ ಇಚ್ಛೆಯಾಗುತ್ತದೆ. ಆಗ ಹಿಂದೆ ಇದಕ್ಕಾಗಿ ಗುರುತು ಮಾಡಿಟ್ಟ ಆ ಭಾಗವನ್ನು ಓದುತ್ತೇವೆ. ಅಥವಾ ಯಾರೋ ವಿನಾಕರಣ ಅಪಮಾನ ಮಾಡಿದುದರಿಂದಾಗಿ ನಮಗೆ ದುಃಖ ಉಂಟಾಗಿರಬಹುದು. ಹೇಗೆ ಅದರಿಂದ ಹೊರಬರುವುದು? ಆಗ ಈ ಸಮಸ್ಯೆಗೆ ಪರಿಹಾರ ನೀಡಿರುವ, ಮೊದಲೇ ಗುರುತು ಮಾಡಿದ ಪುಟಗಳನ್ನು ತಿರುವಿಹಾಕುತ್ತೇವೆ. ಹೀಗೆ, ವಚನವೇದವು ಆಧ್ಯಾತ್ಮಿಕ ಜೀವನದಲ್ಲಿ ಮಾತ್ರವಲ್ಲದೆ ನಿತ್ಯಜೀವನದಲ್ಲೂ ನಮಗೆ ಸಹಾಯಕಾರಿ.

ಗುರುದೇವರು **ಮಾನುಷ್** (ಮನುಷ್ಯನು) **ಮನ್‌ಹುಷ್** (ತನ್ನ ನೈಜಸ್ವರೂಪದ ಅರಿವುಳ್ಳ ವ್ಯಕ್ತಿ) ಆಗಬೇಕೆಂದು ಹೇಳುತ್ತಿದ್ದರು. ವಾಸ್ತವವಾಗಿ, ವಚನವೇದದಲ್ಲಿನ ಉಪದೇಶಗಳನ್ನು ಆಚರಣೆಗೆ ತಂದರೆ, ಅದು ಒಬ್ಬ ವ್ಯಕ್ತಿಯನ್ನು ಅಂಥ ನಿಜವಾದ ಮನುಷ್ಯ ನನ್ನಾಗಿ ಪರಿವರ್ತಿಸುವುದು ಕಂಡುಬರುತ್ತದೆ. ಇಂತಹ ಅದ್ಭುತ ಪರಿವರ್ತನೆಯ ಶಕ್ತಿ ಈ ಉದ್ಗ್ರಂಥದಲ್ಲಿದೆ. ಹೀಗೆ ಇದು ನಿಜಕ್ಕೂ ಒಂದು ಮಹಾನ್ ಕೃತಿ, ಅಸಾಧಾರಣ ಗ್ರಂಥ. ★

## ಸ್ನೇಹಪ್ರಭ

**ನಾವು ಎಷ್ಟೇ ಬೇಡ ಅಂದುಕೊಂಡರೂ. ಇತರರ ಯಶಸ್ಸನ್ನು ಕಂಡರೆ ಅಸೂಯೆ ಉಂಟಾಗುತ್ತದೆ. ಇದನ್ನು ತಡೆಯಲು ಏನು ಮಾಡಬೇಕು?**

ಅಸೂಯೆ ಎನ್ನುವುದು ಗುಲಾಮತನದ ಪರಿಣಾಮ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಗುಲಾಮತನದಿಂದ ವ್ಯಕ್ತಿಯು ತನ್ನ ಬಗ್ಗೆ ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾನೆ. ಅದರಿಂದ ಅವನು ಒಳಗೊಳಗೇ ಸಂಕಟಪಡುತ್ತಿರುತ್ತಾನೆ. ಈ ಕೀಳರಿಮೆಯು ಕೆಳಮಟ್ಟದ ವ್ಯಕ್ತಿಗಳಲ್ಲಿ ಮಾತ್ರವೇ ಇರಬೇಕೆಂದಿಲ್ಲ. ಮೇಲ್ವರ್ಗದವರಲ್ಲಿಯೂ ವಿದ್ಯಾವಂತರಲ್ಲಿಯೂ ಪ್ರತಿಭಾವಂತರಲ್ಲಿಯೂ ಈ ಕೀಳರಿಮೆ ಇರಬಹುದು. ಅವರ ಆಶೆ ಆಕಾಂಕ್ಷೆಗಳು ಪೂರ್ತಿಯಾಗದಿದ್ದಾಗಲೂ ಕೀಳರಿಮೆ ಉಂಟಾಗಬಹುದು. ಆಗ ಇತರರ ಉನ್ನತಿಯನ್ನು ಕಂಡು ಅಸೂಯೆ ಉಂಟಾಗುವುದು ಸಹಜ.

ನಾವು ಗುಲಾಮರಾಗಬೇಕಾಗಿಲ್ಲ, ವಿಧೇಯರಾಗಿರಬೇಕು. ಗುಲಾಮತನವೇ ಬೇರೆ, ವಿಧೇಯತನವೇ ಬೇರೆ. ನಾವು ಹಿರಿಯರಿಗೆ, ಮೇಲಧಿಕಾರಿಗಳಿಗೆ ವಿಧೇಯರಾಗಿರಲೇ ಬೇಕಾಗಿರುತ್ತದೆ. ಗುಲಾಮ ಮನೋಭಾವ ಒಳಗಡೆ ಇರುವಾಗ, ಅದು ಮನಸ್ಸನ್ನು ಕಾಡಿಸುತ್ತಿರುವಾಗ ವ್ಯಕ್ತಿ ಅವಿಧೇಯನಾಗಿ ವರ್ತಿಸುವುದುಂಟು. ಅಸೂಯೆ, ಅವಿಧೇಯತೆ ಇವೆಲ್ಲವೂ ಗುಲಾಮತನದ ದುಷ್ಪರಿಣಾಮಗಳು.

ಈ ಗುಲಾಮತನ ಹೋಗಬೇಕು. ಗುಲಾಮನು ಎಂದೂ ಕೆಲಸದಲ್ಲಿ ಆನಂದವನ್ನು ಕಾಣುವುದಿಲ್ಲ. ಅವನಿಗೆ ಕೆಲಸವು ಬಾಹ್ಯ ಒತ್ತಡವಾಗುತ್ತದೆ. ಆಂತರಿಕ ಪ್ರೇರಣೆಯಿಂದ ಕೆಲಸ ಹೊರಹೊಮ್ಮಬೇಕು. ಕೆಲಸವು ವ್ಯಕ್ತಿಯ ಆತ್ಮೋನ್ನತಿಯ ಸಾಧನವಾಗಬೇಕು. ಆಗ ನಾವು ಎಲ್ಲೇ ಯಾವುದೇ ಕೆಲಸಮಾಡುತ್ತಿರಲಿ, ಅದು ಹೊರೆ ಅನ್ನಿಸುವುದಿಲ್ಲ. ಆಳಾಗಿದ್ದರೂ ಯಜಮಾನನಂತೆ ಕೆಲಸ ಮಾಡಬಹುದು. ಆಗ ಅಸೂಯೆಪಡಲು ಅವಕಾಶವೇ ಇರುವುದಿಲ್ಲ.

ನಮ್ಮ ಪ್ರಜ್ಞೆ ವಿಶಾಲವಾಗಬೇಕು. ನಮ್ಮ ವ್ಯಕ್ತಿತ್ವದ ಪರಿಧಿಯೊಳಗೆ ಎಲ್ಲರನ್ನೂ ಸೇರಿಸಿಕೊಳ್ಳುವಂತಾಗಬೇಕು. ಶ್ರೀಮಾತೆಯವರು ಹೇಳುವಂತೆ ಯಾರೂ ಪರರಲ್ಲ. ಇತರರ ಗರಿಮೆಯೂ ನಮ್ಮದೇ ಗರಿಮೆ. ತಂದೆತಾಯಿಗಳು ಮಕ್ಕಳ ಯಶಸ್ಸಿನಲ್ಲಿ ಆನಂದವನ್ನು ಅನುಭವಿಸುತ್ತಾರೆ – ಮಕ್ಕಳು ತಮ್ಮವರೇ ಆದುದರಿಂದ. ಹಾಗೆಯೇ ಎಲ್ಲರೂ ನಮ್ಮವರೇ ಆದರೆ, ಎಲ್ಲರ ಯಶಸ್ಸೂ ನಮ್ಮದೇ ಆಗುವುದರಿಂದ ಅಸೂಯೆಗೆ ಅವಕಾಶವೇ ಇರುವುದಿಲ್ಲ.

ದ್ವೇಷ ಅಸೂಯೆಗಳು ಉಂಟಾದಾಗ ಅವಕ್ಕೆ ವಿರುದ್ಧವಾದ ಪ್ರೀತಿಯ ಭಾವನೆಯನ್ನು ಮನಸ್ಸಿಗೆ ತಂದುಕೊಳ್ಳಬೇಕು. ಮತ್ತೆ ಮತ್ತೆ ಇದನ್ನು ಮಾಡುವುದರಿಂದ ಕ್ರಮೇಣ ಅಸೂಯಾ ಪ್ರವೃತ್ತಿ ಕಡಮೆಯಾಗುತ್ತದೆ. ಆಂತರಿಕವಾಗಿ ತುಂಬು ಜೀವನವನ್ನು, ಸಾರ್ಥಕ ಜೀವನವನ್ನು ನಡೆಸುವುದರ ಮೂಲಕ ಅಸೂಯೆಯನ್ನು ಗೆಲ್ಲಬಹುದು. (ಬರಹ: ಸ್ವಾಮಿ ನಿತ್ಯಸ್ಥಾನಂದ)